# ಭೂತಾನ್ ರಾಜರು ರಾಷ್ಟ್ರಪತಿಯನ್ನು ಭೇಟಿ ಮಾಡಿದರು

ಏಪ್ರಿಲ್ 04, 2023

ಇಂದು (4 ಏಪ್ರಿಲ್ 2023) ರಾಷ್ಟ್ರಪತಿ ಭವನದಲ್ಲಿ ಭಾರತದ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಭೂತಾನ್ ಮಹಾರಾಜರಾದ ಶ್ರೀ ಜಿಗ್ಮೆ ಖೇಸರ್ ನಮ್ಗ್ಯೆಲ್ ವಾಂಗ್‌ಚುಕ್ ಭೇಟಿ ಮಾಡಿದರು.

ಭಾರತಕ್ಕೆ ಮಹಾರಾಜರನ್ನು ಸ್ವಾಗತಿಸಿದ ರಾಷ್ಟ್ರಪತಿಗಳು, ಪರಸ್ಪರ ನಂಬಿಕೆ, ಸದ್ಭಾವನೆ ಮತ್ತು ತಿಳುವಳಿಕೆಯ ಆಧಾರದ ಮೇಲೆ ಭಾರತ ಮತ್ತು ಭೂತಾನ್ ಎಲ್ಲಾ ಹಂತಗಳಲ್ಲಿ ನಿಕಟ ಪಾಲುದಾರಿಕೆಯನ್ನು ಆನಂದಿಸುತ್ತವೆ ಎಂದು ಹೇಳಿದರು. ಭಾರತವು ಭೂತಾನ್‌ನೊಂದಿಗಿನ ಬಹುಮುಖಿ ಮತ್ತು ವಿಶಿಷ್ಟ ಪಾಲುದಾರಿಕೆಯನ್ನು ಆಳವಾಗಿ ಗೌರವಿಸುತ್ತದೆ ಎಂದು ಅವರು ಹೇಳಿದರು. ಭೂತಾನ್‌ನ ಅತಿದೊಡ್ಡ ಅಭಿವೃದ್ಧಿ ಪಾಲುದಾರನಾಗಿ, ಆರೋಗ್ಯ, ಶಿಕ್ಷಣ, ಕೃಷಿ, ಮೂಲಸೌಕರ್ಯ, ಡಿಜಿಟಲೀಕರಣ ಮತ್ತು ಕೌಶಲ್ಯ ಅಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ಭೂತಾನ್‌ನಲ್ಲಿ ಯೋಜನೆಗಳನ್ನು ಬೆಂಬಲಿಸಲು ಭಾರತವು ಹೆಮ್ಮೆಪಡುತ್ತದೆ ಎಂದು ಅವರು ಹೇಳಿದರು. ಭಾರತದ ಅಭಿವೃದ್ಧಿ ಪಾಲುದಾರಿಕೆಯು ಭೂತಾನ್‌ನ ಆದ್ಯತೆಗಳು ಮತ್ತು ಆಕಾಂಕ್ಷೆಗಳಿಂದ ಮಾರ್ಗದರ್ಶಿಸಲ್ಪಡುತ್ತದೆ ಎಂದು ಅವರು ಭರವಸೆ ನೀಡಿದರು.

ಈ ವರ್ಷ ಭೂತಾನ್ ಕಡಿಮೆ ಅಭಿವೃದ್ಧಿ ಹೊಂದಿದ ದೇಶದ (ಎಲ್‌ಡಿಸಿ) ವರ್ಗವನ್ನು ಮೀರಿ ಹೆಚ್ಚಿನ ಆದಾಯದ ಆರ್ಥಿಕತೆಯ ಹಾದಿಯಲ್ಲಿ ನಡೆಯಲು ತಯಾರಾಗಿದೆ ಎಂದು ರಾಷ್ಟ್ರಪತಿ ಹೇಳಿದರು. ಈ ಪ್ರಯಾಣದಲ್ಲಿ ಭಾರತವು ಭೂತಾನ್‌ನ ವಿಶ್ವಾಸಾರ್ಹ ಪಾಲುದಾರನಾಗಿ ಉಳಿಯುತ್ತದೆ ಎಂದು ಅವರು ಹೇಳಿದರು.

ಭಾರತ ಮತ್ತು ಭೂತಾನ್ ಕೂಡ ಫಿನ್-ಟೆಕ್, ಸ್ಟಾರ್ಟ್-ಅಪ್ ಮತ್ತು ಉದಯೋನ್ಮುಖ ತಂತ್ರಜ್ಞಾನ ಫ್ರಂಟ್ ಗಳಲ್ಲಿ ಸಹಕರಿಸುತ್ತಿವೆ ಎಂದು ರಾಷ್ಟ್ರಪತಿ ಗಮನಿಸಿದರು. ನಮ್ಮ ಯುವಕರ ಶಕ್ತಿ ಮತ್ತು ಸಾಮರ್ಥ್ಯವನ್ನು ಸರಿಯಾಗಿ ಬಳಸಿಕೊಳ್ಳಲು ಎರಡು ದೇಶಗಳು ಈ ಸಹಯೋಗದ ವ್ಯಾಪ್ತಿಯನ್ನು ವಿಸ್ತರಿಸಬೇಕು ಎಂದು ಅವರು ಹೇಳಿದರು.

**ನವ ದೆಹಲಿ**

**ಏಪ್ರಿಲ್ 04, 2023**